ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ



ವಿಜಯವಾಣಿ ಚಿತ್ರ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹಮ್ಮಿಕೊಂಡಿದ್ದ ಸಂಸ್ಕೃತೋತ್ಸವದಲ್ಲಿ ಕುಲ... ಡಾ. ಅಹಲ್ಯಾ ಹಾಗೂ ಕುಲ... ಡಾ. ರೂಪಶ್ರೀ ಅವರು ಸಂ... ನಡಿಗೆಗೆ ಚಾಲನೆ ನೀಡಿದರ... ಉನ್ನತ ಶಿಕ್ಷಣ ಇಲಾಖೆ ಉಪಕಾರ್ಯದರ್ಶಿ ರಾಜಶ್ರೀ... ಸಂಸ್ಕೃತ ವಿದ್ಯಾರ್ಥಿಗಳು ಹ... ಶಿಕ್ಷಕರು ಪಾಲ್ಗೊಂಡಿದ್ದರು.

ಗೆಂಪು ಬಣ್ಣ, ... ನೀಲಿ ಪ್ಯಾಂಟ್ ಧರಿಸಿದ್ದಾನೆ. ವಾರಸುದಾರರಿದ್ದಲ್ಲಿ ಹೆಬ್ಬೂರು ಪೊಲೀಸ್ ಠಾಣೆಯಲ್ಲಿ ವಿವರ ಪಡೆಯಬಹುದು.

... ಸಚಿವರಾದ ಡಾ: ಜಿ.ಪರಮೇಶ್ವರ್ ಅವರು ಹೇಳಿದರು.

# ಸಂ. ವಿವಿಯಲ್ಲಿ ಸಂಸ್ಕೃತೋತ್ಸವ

ಬೆಂಗಳೂರು: ರಾಜ್ಯ ಸಂಸ್ಕೃತ ವಿಶ್ವವಿದ್ಯಾನಿಲಯದ ಸಂಸ್ಕೃತೋತ್ಸವ ಸಮಾರಂಭ ನಿನ್ನೆ (ಸೆ.೨೦) ಜರುಗಿತು. ವಿಶ್ವವಿದ್ಯಾನಿಲಯದ ವತಿಯಿಂದ ಸಂಸ್ಕೃತ ವಾಚನ, ಕಂಠಪಾಠ ಸ್ಪರ್ದೆ ಇತ್ಯಾದಿ ಕಾರ್ಯಕ್ರಮಗಳು ಜರುಗಿತು. ಸಂಜೆ ಸಮಾರೋಪದಲ್ಲಿ ವಿವಿಯ ಕುಲಪತಿ ಶ್ರೀಮತಿ ಡಾ.ಅಹಲ್ಯ. ಸಮಾರಂಭದ ಅದ್ಯಕ್ಷತೆ ವಹಿಸಿದ್ದರು.

ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಉಪಕಾರ್ಯದರ್ಶಿ ಶ್ರೀಮತಿ ರಾಜಶ್ರೀ, ಕುಲಸಚಿವೆ ಡಾ.ರೂಪಶ್ರೀ ಮುಂತಾದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಈ ಸಮಾರಂಭದಲ್ಲಿ ಸಂಸ್ಕೃತ ಮೆರತಾನ್ ನಡಿಗೆ ಜರುಗಿತು.

ವೇದಾಂತ ವಿಭಾಗದ ಪ್ರೊ.ಡಿನ್, ಪ್ರೊ.ವೀರನಾರಾಯಣ ಪಾಂಡುರಂಗಿ ಸ್ವಾಗತಿಸಿದರು. ಹಲವು ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಶುಕ್ರವಾರ 22.09.2023

ವಿಶ್ವಕಪ್‌ಗೆ ಸಿದ್ಧತೆ: ಭಾರತ, ಆಸೀಸ್ ಏಕದಿನ ಸರಣಿ ಇಂದಿನಿಂದ ▶15

ಏಷ್ಯನ್ ಗೇಮ್ಸ್ ಮಹಿಳಾ ಕ್ರಿಕೆಟ್ ಸೆಮಿಫೈನಲ್‌ಗೆ ಭಾರತ ಲಗ್ಗೆ 15

# ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಚಿತ್ರಪ್ರಭ ಪುಟದಲ್ಲಿಂದು

ವರ್ಷಾಂತ್ಯಕ್ಕೆ ಕಾಂತಾರ-2 ಚಿತ್ರೀಕರಣ ಶುಭಾರಂಭ

ರಿಷಬ್ ಶೆಟ್ಟಿ ನಟನೆ, ನಿರ್ದೇಶನದ 'ಕಾಂತಾರ 2' ಚಿತ್ರದ ಚಿತ್ರೀಕರಣಕ್ಕೆ ಭರದಿಂದ ಸಾಗಿದೆ ತಯಾರಿ. ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಚಿತ್ರೀಕರಣ ಆರಂಭ 16

# ಮಕ್ಕಳಲ್ಲಿ ಸಂಸ್ಕೃತ ಕಡ್ಡಾಯ ಮಾಡಿ: ಆ. ದೇವೇಗೌಡ

## ಸಂಸ್ಕೃತ ಶಿಕ್ಷಕರ ತರಬೇತಿ ಸೇತುಬಂಧ ಕಾರ್ಯಾಗಾರದಲ್ಲಿ ದೇವೇಗೌಡ ಅಸಮಾಧಾನ

• **ಕನ್ನಡಪ್ರಭ ವಾರ್ತೆ** ಕುಣಿಗಲ್

ಮಕ್ಕಳಲ್ಲಿ ಸಂಸ್ಕೃತ ಶಿಕ್ಷಣವನ್ನು ಕಡ್ಡಾಯ ಮಾಡಿದಾಗ ಸಂಸ್ಕೃತ ಉಳಿಯಲು ಸಾಧ್ಯವಾಗುತ್ತದೆ, ಚಂದ್ರಯಾನ, ಸೂರ್ಯಯಾನದ ಯಶಸ್ಸಿನ ವ್ಯಕ್ತಿ ಯೇ ಸು. ಸೋಮನಾಥ ಸಂಸ್ಕೃತದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆದರೂ, ಕೂಡ ಈ ಕಾಂಗ್ರೆಸ್ ಸರ್ಕಾರದಲ್ಲಿ ಕಷ್ಟ ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಆ ದೇವೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಕುಣಿಗಲ್ ತಾಲೂಕಿನ ಫಿರಂಗಿ ಗವಿಮಠದಲ್ಲಿ ಸಂಸ್ಕೃತ ನಿರ್ದೇಶನಾಲಯ ವತಿಯಿಂದ ಏರ್ಪಡಿಸಿದ್ದ ಸಂಸ್ಕೃತ ಶಿಕ್ಷಕರ ತರಬೇತಿ ಸೇತುಬಂದ-2ರ ಕಾರ್ಯಾಗಾರದಲ್ಲಿಭಾಗವಹಿಸಿಮಾತನಾಡಿದರು.ಮಾಗಡಿಯ 100 ಎಕರೆ ನೆಲದಲ್ಲಿಸಂಸ್ಕೃತ ವಿಶ್ವವಿದ್ಯಾನಿಲಯ ಪ್ರಾರಂಭವಾಗುತ್ತಿದೆ. ಅದನ್ನು ಪ್ರಾರಂಭಿಸಲು ನಾನು ಮಾಡಿದ ಹೋರಾಟ ಆ ಭೂಮಿ ಬೇರೆಯವರ ಪಾಲಾಗಬಾರದು ಎಂದು ಸಂಸ್ಕೃತಕ್ಕೆ ಮೀಸಲಿರಿಸಲಾಯಿತು.

ಪಂಪರನ್ನಕಾಳಿದಾಸಸೇರಿದಂತೆಹಲವಾರು ಕವಿಗಳು ರಚಿಸಿದ ಸಂಸ್ಕೃತ ಭಾಷೆಯನ್ನು ಯುವಕರಿಗೆ ಕಲಿಸುವಲ್ಲಿ ಮೊಬೈಲ್, ಕಂಪ್ಯೂಟರ್‌ಗಳಿಗೆ ಅಳವಡಿಸ ಬೇಕಿದೆ ಎಂದು ಸಲಹೆನೀಡಿದರು,ಇಸ್ರೋಅಧ್ಯಕ್ಷರಾದಎಸ್ ಸೋಮನಾಥ್ ಅವರು ಸಂಸ್ಕೃತದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಸ್ಕೃತ ಮತ್ತು ವಿಜ್ಞಾನ ಎರಡು ಅವಿಭಾಜ್ಯ ಅಂಗಗಳಾಗಿವೆ ಎಂದರು. ಸಂಸ್ಕೃತ ಶಿಕ್ಷಣ ನಿರ್ದೇಶನದ ನಿರ್ದೇಶಕರಾದ ಪ್ರೊ. ಪಾಲಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸ್ಕೃತ ಭಾರತೀ ಸಹಸಂಪಾದಕರಾದ ಡಾಕ್ಟರ್‌ಸಚಿನ್ ಕಠಲೆ ಮಾತನಾಡಿ, ಸಂಸ್ಕೃತ ಸರಳ ಭಾಷೆಯಾಗಿದೆ. ಮೊದಲು ಭಾಷೆಯನ್ನು ಸಾಮಾನ್ಯ ಜನರಿಗೆ ಪರಿಚಯಿ ಸುವ ಕೆಲಸ ಆಗಬೇಕಿದೆ. ಪ್ರತಿ ಶಿಕ್ಷಕರು ಆ ಕೆಲಸ ಮಾಡಿದಾಗ, ಭಾಷೆ ಉಳಿವು ಸಾಧ್ಯ ಎಂದರು, ಅಂಕನಹಳ್ಳಿ ಗವಿಮಠದ ಪೀಠಾಧ್ಯಕ್ಷರಾದ ಶಿವರುದ್ರ ಶಿವಾಚಾರ್ಯ ಸ್ವಾಮೀಜಿ ಹಾಗೂ ಸಂಸ್ಥೆಯ ಕಾರ್ಯದರ್ಶಿಯಾದ ಬಿಎಂ ಲೋಕೇಶ್, ಸಂಸ್ಕೃತ ಶಿಕ್ಷಕರಾದ ಗಂಗಾಧರ್‌ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ನೂರಾರು ಶಿಕ್ಷಕರು ಸೇತುಬಂಧ-2 ಭಾಗವಹಿಸಿದ್ದರು.



ಕುಣಿಗಲ್ ತಾಲೂಕಿನ ಫಿರಂಗಿ ಗವಿಮಠದಲ್ಲಿ ಸಂಸ್ಕೃತ ನಿರ್ದೇಶನಾಲಯದ ವತಿಯಿಂದ ಏರ್ಪಡಿಸಿದ್ದ ಸಂಸ್ಕೃತ ಶಿಕ್ಷಕರ ತರಬೇತಿ ಸೇತುಬಂಧ.